ಮಾಡಿದವರಿಗೂ ಕೂಡ 20 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಬಾಕಿ ನಾವು ಎಕ್ಸ್‌ಪೋರ್ಟ್ ಮಾಡುತ್ತಿರುವಂತಹ 20 ಸಾವಿರ ಕೋಟಿ ರೂಪಾಯಿಯನ್ನು ನೀವು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಇನ್ನು 25–30 ಕೋಟಿ ನಮಗೆ ಹೆಚ್ಚಿಗೆ ಬರುತ್ತದೆ. ಎಂದು ನಾನು ಒತ್ತಾಯವನ್ನು ಮಾಡಿದ್ದೇನೆ. ಇದನ್ನು ಕೊಡಬಹುದೆಂದು ಎಂದು ನನಗಿಸುತ್ತದೆ. ಈ ಮಧ್ಯ ತಾವು 2–3 ವರ್ಷದ ಹಿಂದೆ ಒಂದು ರಸ್ತೆಗೆ ತಾವು 15 ಕೋಟಿ ರೂಪಾಯಿಗಳನ್ನು ತಾವು ರಿಲೀಸ್ ಮಾಡಿದ್ದೀರಿ. ಸ್ಯಾಂಕ್ಷನ್ ಮಾಡಿಸಿಕೊಂಡು ಬಂದು ಅದರಲ್ಲಿ 3–4 ಕೋಟಿ ರಿಲೀಸ್ ಆಗಿದೆ ಉಳಿದಿರುವುದು ಆಗಿಲ್ಲ. ಕೇಂದ್ರಸರ್ಕಾರದಿಂದ ಹಣ ಬಂದಹಾಗೆ ಎಲ್ಲಾ ನಾನು ಅದಕ್ಕೆ ಆದ್ಯತೆಯನ್ನು ಕೊಟ್ಟು ಪರಿಶೀಲನೆಯನ್ನು ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : 65 ಸಾವಿರ ಕೋಟಿಯ ವಿಶೇಷ ಒಂದು ಯೋಜನೆಯನ್ನು ತಾವು ಘೋಷಣೆ ಮಾಡಿದ್ದೀರಿ. ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ಪ್ರಯತ್ನ ಪಡುತ್ತಿದ್ದೀರಾ. ಅದು ಯಾವ ಹಂತದಲ್ಲಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡುತ್ತೇನೆ.

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**2333**
2. ಸದಸ್ಯರ ಹೆಸರು	:	**ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ)**
3. ಉತ್ತರಿಸುವವರು	:	**ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಕ್ರ.ಸಂ. ಪ್ರಶ್ನೆ

ಅ) ಹುಬ್ಬಳ್ಳಿ ಅಂಕೋಲ ರೈಲ್ವೆ ಮಾರ್ಗದ ಕಾಮಗಾರಿ ಯಾವ ಹಂತದಲ್ಲಿದೆ ಹಾಗೂ ಈ ಭಾಗದ ಬ್ರಾಡ್‌ಗೇಜ್ ಪರಿವರ್ತನೆ ಕಾರ್ಯ ಪ್ರಗತಿಯಲ್ಲಿದೆಯೇ?

ಉತ್ತರ

ಹುಬ್ಬಳ್ಳಿ ಅಂಕೋಲ ಬ್ರಾಡ್ ಗೇಜ್ ಮಾರ್ಗ ಹೊಸ ಯೋಜನೆಯಾಗಿರುತ್ತದೆ. ಹುಬ್ಬಳ್ಳಿಯಿಂದ 33 ಕಿ.ಮಿ.ವರೆಗಿನ ಮಾರ್ಗದಲ್ಲಿ ಸಣ್ಣ ಸೇತುವೆಗಳು ಮತ್ತು

ಇತರೆ ಭೂಕಾಮಗಾರಿಗಳನ್ನು ಮಾಡಲಾಗುತ್ತಿದೆ. ಸುಮಾರು 8 ಕಿ.ಮಿ. ಮಾರ್ಗಕ್ಕೆ ಅಗತ್ಯವಿರುವ ಭೂಮಿಯನ್ನು ಭೂಸ್ವಾದೀನ ಪಡಿಸಿಕೊಳ್ಳಲಾಗುತ್ತಿದೆ. ರೈಲ್ವೆ ಇಲಾಖೆಯು 740 ಹೆಕ್ಟೇರು ಅರಣ್ಯ ಭೂಮಿಯನ್ನು ಪಡೆಯಲು ಪರಿಸರ ಮಂತ್ರಾಲಯದ ಅನುಮೋದನೆಯನ್ನು ಪಡೆಯಬೇಕಾಗಿದೆ.

ಕ್ರ.ಸಂ. ಪ್ರಶ್ನೆ

ಆ) ಈ ಬಗ್ಗೆ ರಾಜ್ಯದ ಕೆ–ರೈಡ್ ನಿಂದ ಎಷ್ಟು ಅನುದಾನ ನೀಡುವ ಭರವಸೆ ನೀಡಲಾಗಿದೆ. ಹಾಗೂ ಈ ಪೈಕಿ ಎಷ್ಟೆಷ್ಟು ಹಣವನ್ನು ಯಾವಾಗ ಬಿಡುಗಡೆ ಮಾಡಲಾಗಿದೆ (ವಿವರ ಒದಗಿಸಿರಿ)

ಉತ್ತರ

ಕೆ–ರೈಡ್ ಈ ಪ್ರಾಯೋಜನೆಗೆ ಯಾವುದೇ ಹಣಕಾಸಿನ ಬದ್ದತೆ ಮಾಡಿರುವುದಿಲ್ಲ.

ಕ್ರ.ಸಂ. ಪ್ರಶ್ನೆ

ಇ) ಹುಬ್ಬಳ್ಳಿ ಅಂಕೋಲ ಮಾರ್ಗ ಅಲ್ಲದೆ ಕರಾವಳಿ ಒಳನಾಡಿನ ಸಂಪರ್ಕ ರೈಲ್ವೆ ಲೈನನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ.

ಉತ್ತರ

ಕರಾವಳಿ ಒಳನಾಡಿಗೆ ಕೊಂಡಿಯಾಗಿರುವ ಹಾಸನ ಮಂಗಳೂರು ರೈಲ್ವೆ ಮಾರ್ಗವನ್ನು 2005 ನೇ ಸಾಲಿನ ಮಧ್ಯ ಭಾಗದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಕ್ರ.ಸಂ. ಪ್ರಶ್ನೆ

ಈ) ಕೆ–ರೈಡ್ ನಿಂದ ರಚಿಸಲಾಗುತ್ತಿರುವ ರಾಜ್ಯದ ಇತರ ರೈಲ್ವೆ ಮಾರ್ಗಗಳ್ಯಾವುವು (ಪ್ರಗತಿ ಮತ್ತು ಹಂತದ ಕಾಮಗಾರಿಗಳ ವಿವರ ನೀಡುವುದು)?

ಉತ್ತರ

ಕೆ–ರೈಡ್‌ನ ಇತರೆ ಮೂಲ ಪ್ರಾಯೋಜನೆಗಳು ಇಂತಿವೆ. 1) ಹಾಸನ – ಮಂಗಳೂರು ಗೇಜ್ ಪರಿವರ್ತನ ಯೋಜನೆ – ಸಕಲೇಶಪುರ ಮತ್ತು ಸುಬ್ರಮಣ್ಯ ಮಾರ್ಗದ 55 ಕಿ.ಮಿ. ವರೆಗಿನ ನಿರ್ಮಾಣ ಕಾರ್ಯ

ಪ್ರಗತಿಯಲ್ಲಿದೆ. ಈ ಯೋಜನೆಯನ್ನು H.M.R.D.C. ಕಂಪನಿ ಅನುಷ್ಠಾನ ಮಾಡುತ್ತಿದೆ.

2) ಸೊಲ್ಲಾಪುರ ಗದಗ್‌ಗೇಜ್ ಪರಿವರ್ತನೆ ಯೋಜನೆ ಬಿಜಾಪುರ – ಬಸವನಬಾಗೇವಾಡಿ ವಿಭಾಗದಲ್ಲಿ ಕೆಲಸ ಪ್ರಗತಿಯಲ್ಲಿದೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ. ಹುಬ್ಬಳ್ಳಿ ಅಂಕೋಲ ರೈಲ್ವೆ ಮಾರ್ಗ ಹಿಂದೆ ಪ್ರಧಾನಿಯಾಗಿದ್ದಂತಹ ಅಟಲ್‌ಬಿಹಾರಿ ವಾಜ್‌ಪೇಯಿಯವರು ಅದಕ್ಕೆ ಅಡಿಗಲ್ಲನ್ನು ಇಟ್ಟರು. ಅದು ಬಹಳ ವಿಳಂಬ ಗತಿಯಲ್ಲಿ ಕೆಲಸ ನಡೆಯುತ್ತಿದೆ. ಈಗಂತೂ ಪರಿಸರ ಮಂತ್ರಾಲಯದ ಅನುಮೋದನೆ ಪೂರ್ಣವಾಗಿ ಸಿಗದೆ ಕೇವಲ 5 ಕೋಟಿ ರೂಪಾಯಿಗಳು ಮಾತ್ರ ಈ ಸಲ ಕೇಂದ್ರ ಸರ್ಕಾರದ ರೈಲ್ವೆ ಬಜೆಟ್‌ನಲ್ಲಿ ಇಟ್ಟು ಆ ರೈಲ್ವೆ ಲೈನ್‌ಗೆ ಅದು ಸದ್ಯ ಆಗುವುದಿಲ್ಲವೆನ್ನುವಂತಹ ಸಂಶಯ ಇವತ್ತು ಜನರಲ್ಲಿ ಬರುವಂತಹ ಸ್ಥಿತಿಯಾಗಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ನಾವು ಇಡೀ ದೇಶದ ತುಂಬಾ ರೈಲ್ವೆ ಲೈನ್ ಹಾಕುವುದಕ್ಕೆ ನಮ್ಮ ಅರಣ್ಯವನ್ನು ನಮ್ಮ ಪರಿಸರವನ್ನು ಹಾಳು ಮಾಡಿಕೊಂಡು ರೈಲ್ವೆ ಲೈನ್ ಹಾಕುವುದಕ್ಕೆ ನಮ್ಮ ಕಂಬವನ್ನು ಕೊಟ್ಟಿದ್ದೇವೆ. ಮೊದಲು ಮದ್ರಾಸ್ ಪ್ರಾಂತ್ಯ ಇತ್ತು. 140 ವರ್ಷದ ಹಿಂದೆ ಮದ್ರಾಸ್ ಪ್ರಾಂತ್ಯ ಇರುವಾಗ ಈ ರೈಲ್ವೆ ಲೈನ್ ಸರ್ವೆಯಾಗಿದೆ. ಆದರೆ ಇದುವರೆವಿಗೂ ಕೆಲಸ ಕಾಮಗಾರಿ ಯಾವುದೇ ರೀತಿಯಲ್ಲಿ ತೃಪ್ತಿಕರವಾಗಿಲ್ಲ. ನಾನು ಮಾನ್ಯ ಸಚಿವರಲ್ಲಿ ಕೇಳುವುದಿಷ್ಟೆ. ಈಗ ಪರಿಸರ ಮಂತ್ರಾಲಯದಲ್ಲಿ ತಾವು ಈ ಯೋಜನೆಯ ಮಹತ್ವದ ಹಿನ್ನೆಲೆಯಲ್ಲಿ ಅವರಿಗೆ ಮನವರಿಕೆ ಮಾಡಿಕೊಡುವಂತಹ ಯಾವುದೇ ಪ್ರಯತ್ನ ಮಾಡುತ್ತಿದ್ದೀರಿ. ಮತ್ತೇ ಕೇಂದ್ರ ಸರ್ಕಾರದವರು ಕೆಲವು ಸಭೆಯನ್ನು ಕರೆದಾಗ ರಾಜ್ಯ ಸರ್ಕಾರದ ಅಧಿಕಾರಿಗಳು ಹೋಗಲಿಲ್ಲವೆಂದು. ರಾಜ್ಯ ಸರ್ಕಾರದವರು ಇರುವಾಗ ಕೇಂದ್ರ ಸರ್ಕಾರದವರು ಬರಲಿಲ್ಲವೆಂದು ಹೀಗೆ ಅಧಿಕಾರಿಗಳು ಆ ಸಭೆಯಲ್ಲಿ ಭಾಗವಹಿಸದೆಯೇ ಈ ಯೋಜನೆಯು ಮತ್ತಷ್ಟು ನೆನಗುದಿಗೆ ಬೀಳುತ್ತಿದೆ. ಮೊನ್ನೆ ಕೇಂದ್ರದಲ್ಲೂ ಈ ವಿಷಯ ನಿರ್ಲಕ್ಷ್ಯ ಕಾಡುತ್ತಿರುವ ಬಗ್ಗೆ ಪ್ರಸ್ತಾಪಗಳು ಆಗಿದೆ. ಹಾಗಾಗಿ ಸರ್ಕಾರ ಪರಿಸರ ಮಂತ್ರಾಲಯದಲ್ಲಿ ಯಾವ ಪ್ರಯತ್ನವನ್ನು ಮಾಡಿ ಅವರಿಗೆ ಮನದಟ್ಟು ಮಾಡಿಕೊಡುವಂತಹ ಯಾವ ಪ್ರಯತ್ನವನ್ನು ಮಾಡುತ್ತಿದೆ. ಅಧಿಕಾರಿಗಳ ಮಧ್ಯೆ ಗೊಂದಲದಿಂದ ಇದೇನು ವಿಳಂಬವಾಗುತ್ತಿದೆ ಇದನ್ನು ಸರಿಪಡಿಸುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬೇಕು.

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ. ಇದೊಂದು ಬಹಳ ಮಹತ್ವವಾದಂತಹ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದಾಗಿ ಆಗಬೇಕಾಗಿರುವಂತಹ ಒಂದು ಯೋಜನೆಯಾಗಿದೆ. ಕೊಂಕಣ ರೈಲ್ವೆಯನ್ನು ನಮ್ಮ ರೈಲ್ವೆಗೆ ಕನೆಕ್ಟ್ ಮಾಡುವಂತಹ ಹುಬ್ಬಳ್ಳಿಗೆ ರೈಲ್ವೆ ಮಾಡುವಂತಹ ಬಹಳ ಮಹತ್ವ ಪೂರ್ಣವಾಗಿರುವಂತಹ ಯೋಜನೆಯಾಗಿದೆ. ಇದು ಕೆರೇಡ್ ಮತ್ತೆ ರಾಜ್ಯಸರ್ಕಾರದವರು ಮತ್ತು ಕೇಂದ್ರಸರ್ಕಾರದವರು ಸೇರಿ ಮಾಡಿರತಕ್ಕಂತಹದ್ದು ಒಪ್ಪಂದವಾಗಿದೆ, ಅದಕ್ಕೆ ಪರಿಸರ ಇಲಾಖೆಯವರು ಪರ್ಮಿಶನ್ ಕೊಡದೆ ಇರುವುದರಿಂದ ಈ ಯೋಜನೆ ಇಲ್ಲಿಗಿ ನಿಂತಿದೆ. ಸರ್ಕಾರ ಯಾವುದೇ ಕಾರಣಕ್ಕೂ ಸಹಿತ ಅಂಕೋಲ ಮತ್ತು ನೆಕ್ಸ್ಟ್‌ಟೈಮ್ ಪೋರ್ಟ್‌ಗಳಾದ ಕಾರವಾರ. ಬಿಳಿಕೆರೆ. ಮಂಗಳೂರು ಪೋರ್ಟ್‌ಗೆ ಕನೆಕ್ಟಿವಿಟಿ ಕೊಡಬೇಕಾದರೆ ನಮ್ಮ ಎಕಾನಾಮಿಕ್ ಆಕ್ಟಿವಿಟಿ ಹೆಚ್ಚಾಗಬೇಕಾದರೆ ಇದನ್ನು ಮಾಡುವುದರ ಬಗ್ಗೆ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾವು ಈಗಾಗಲೇ ನಮ್ಮ ಅಧಿಕಾರಿಗಳ ತಪ್ಪು ನನಗೆ ಎಲ್ಲಿ ಸಹಿತ ಕಾಣುತ್ತಾ ಇಲ್ಲ, ಅಧಿಕಾರಿಗಳು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ಸುಮಾರು 965 ಹೆಕ್ಟೆರ್ ಇದಕ್ಕೆ ಒರ್ಜಿನಲಿ ಈ ಪ್ರಾಜೆಕ್ಟ್‌ನ್ನು ಮಾಡಿದಾಗ 965 ಹೆಕ್ಟೆರ್ ಲ್ಯಾಂಡ್ ಇದಕ್ಕೆ ಬೇಕಾಗುತ್ತದೆಂದು ಹೇಳಿದ್ದರು. ಇಷ್ಟೊಂದು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದಮೇಲೆ ಎಷ್ಟು ಕಡಿಮೆ ಮಾಡಬೇಕೆಂಬುದರ ಬಗ್ಗೆ ಕರೆಸ್ಪಾಂಡೆನ್ಸ್ ನಡೆಯುತ್ತಿದೆ. ನಾನು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ. ಅಧಿವೇಶನದ ನಂತರ ಎನ್‌ವರ್ನಮೆಂಟ್ ಡಿಪಾರ್ಟಮೆಂಟ್ ಮತ್ತು ರೈಲ್ವೆ ಡಿಪಾರ್ಟಮೆಂಟ್. ಈ ಸಾರಿ ರೈಲ್ವೆ ಡಿಪಾರ್ಟಮೆಂಟಿನ ಬಜೆಟ್‌ನಲ್ಲಿ ಈ ಒಂದು ಯೋಜನೆಗೆಂದು ಸುಮಾರು 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆಂದು ನಾನು ತಿಳಿದು ಪಟ್ಟಿದ್ದೇನೆ. 2005–06ನೇ ಸಾಲಿನಲ್ಲಿ ಈ ಯೋಜನೆಗೆ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ಇದು ಸುಮಾರು 997 ಕೋಟಿ ರೂಪಾಯಿಗಳು ಒರ್ಜಿನಲ್ ಟೋಟಲ್ ಕಾಸ್ಟ್ ಆಫ್ ದಿ ಪ್ರಾಜೆಕ್ಟ್ ಎಸ್ಟಿಮೇಟ್ ಮಾಡಿದಾಗ 997 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಆಗಿದೆ. ಎನ್‌ವರ್ನಮೆಂಟ್ ಕ್ಲಿಯರೆನ್ಸ್ ಈಸ್ ಬಾಟಲ್ ನೆಕ್ ಅದಕ್ಕೋಸ್ಕರ ಅವರಿಗೆ ಕಡಿಮೆ ಜಮೀನು ಮಾಡಿ ಇದನ್ನು ಒಲಿಸುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ನಾವು ಮಾಡುತ್ತಿದ್ದೇವೆ. ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಅಷ್ಟೇ ಅಲ್ಲ. ರಾಜ್ಯ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಧಿವೇಶನದ ನಂತರ ರೈಲ್ವೆ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ಅನೇಕ ಕೆಲಸಗಳು ಆಗಬೇಕಾಗಿರುವುದು

ಇದೆ. ಅದರಿಂದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ನಿಯೋಗವನ್ನು ಪ್ರಧಾನಮಂತ್ರಿಗಳ ಹತ್ತಿರ ಮತ್ತು ರೈಲ್ವೆ ಮಂತ್ರಿಗಳ ಹತ್ತಿರ ಹೋಗಿ ನಾವು ಒತ್ತಾಯವನ್ನು ಮಾಡುವವರಿದ್ದೇವೆ. ಆ ಸಂದರ್ಭದಲ್ಲಿ ಇದನ್ನು ಸಹಿತ ನಾನು ಕೈಗೆತ್ತಿಕೊಳ್ಳುತ್ತೇನೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ. ರೈಲ್ವೆ ಆಯವ್ಯಯವನ್ನು ಮಂಡಿಸುವುದಕ್ಕೆ ಮುಂಚೆಯೇ ತಾವು ನಿಯೋಗ ಹೋಗಿ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ನಮ್ಮ ರಾಜ್ಯದ ರೈಲ್ವೆ ಬೇಡಿಕೆಗಳ ಬಗ್ಗೆ ನೀವು ಒತ್ತಾಯವನ್ನು ಮಾಡಿ ನಮ್ಮ ಲೋಕಸಭಾ ಸದಸ್ಯರು ಒತ್ತಾಯ ಮಾಡಿದರೆ ಕನಿಷ್ಟ ನಿಮಗೆ ಅನುಕೂಲ ಸಿಗುತ್ತಿತ್ತು. ಇವತ್ತು ರೈಲ್ವೆ ಆಯವ್ಯಯದಲ್ಲಿ ಇಡೀ ದೇಶದಲ್ಲಿಯೇ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ತಮಿಳುನಾಡು. ಆಂಧ್ರ, ಕೇರಳ ಇಲ್ಲಿಗೆ ಅನುಕೂಲವಾಗುತ್ತಿದೆ. ಮುಂದೆ ನೀವು ನಿಯೋಗ ಹೋದರೆ ಏನು ಪ್ರಯೋಜನವಾಗುತ್ತದೆ. ದಯಮಾಡಿ ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಸಮಯಕ್ಕೆ ತಕ್ಕಂತೆ ನಿಯೋಗ ಹೋಗಿದ್ದರೆ. ಸಮಯಕ್ಕೆ ತಕ್ಕಂತೆ ಹೇಳಿದ್ದರೆ ನಮ್ಮ ಬೇಡಿಕೆಗಳೇನು? ಯಾವುದನ್ನು ಹೇಳದೆಯೇ ಮುಂದೆ ನಿಯೋಗ ಹೋಗುವುದಾದರೆ ಈ ಸಂಪೂರ್ಣ ಆ ಬೇಡಿಕೆ ಅದೆಲ್ಲವೂ ಹಾಗೆ ಮುಗಿದುಹೋಗಿ ಓಟು ತೆಗೆದುಕೊಂಡು ಮುಗಿದ ಮೇಲೆ ನೀವು ಏತಕ್ಕಾಗಿ ಹೋಗುತ್ತಿದ್ದೀರಿ. ಇದರಿಂದ ನಿಮಗೆ ಎನು ಪ್ರಯೋಜನ? ಈ ತರಹ ಹೇಳುವುದರಿಂದ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಬಾಯಿಯಿಂದಲೇ ಉತ್ತರವನ್ನು ಕೊಡಬೇಕಾಗುತ್ತದೆ. ಮತ್ತು ಹೇಳಬೇಕಾಗುತ್ತದೆ. ಈಗ ಮಾನ್ಯ ಹಿರಿಯ ಸದಸ್ಯರಾಗಿರುವಂತಹ ವಾಟಾಳ್ ನಾಗರಾಜ್‌ರವರು ಹೇಳಿರುವಂತಹ ಸಲಹೆ ಸರಿಯಾಗಿದೆ. ನಾವು ಎರಡು ಮೂರು ಬಾರಿ ಲೋಕಸಭಾ ಸದಸ್ಯರ ಸಭೆಯನ್ನು ಕರೆದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ನಾವು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಅದಾದ ನಂತರ ನಾವು ಲಾಲುಪ್ರಸಾದ್ ಯಾದವ್‌ರವರನ್ನು ಕೂಡ ಭೇಟಿ ಮಾಡಿ ಸರ್ಕಾರದಿಂದ ಇವೆಲ್ಲವೂ ಆಗಬೇಕೆಂದು ಕೇಳಿ ಸುಮಾರು 18 ಪ್ರಾಜೆಕ್ಟ್‌ಗಳು ನಮ್ಮಲ್ಲಿ ಪೆಂಡಿಂಗ್ ಇದೆ ಎಂದು ಅವರಿಗೆ ಕೊಟ್ಟಿದ್ದೇವೆ. ಇದು ಅಲ್ಲದೆ ಬಜೆಟ್‌ನ್ನು ಮಂಡನೆ ಮಾಡುವುದಕ್ಕಿಂತ ಮುನ್ನ ಮುಖ್ಯಮಂತ್ರಿಗಳಿಂದ 23–2–2005ರಿಂದ ಮಾನ್ಯ ರೈಲ್ವೆ ಮಂತ್ರಿಗಳಿಗೆ ನಾವು ಪತ್ರವನ್ನು ಬರೆದು ಇವೆಲ್ಲವೂ ಆಗಬೇಕೆಂದು ಹೇಳಿದ್ದೇವೆ. ಮಾನ್ಯ ಪ್ರಧಾನಮಂತ್ರಿಗಳು ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿಯೂ ಕೂಡ ಇವೆಲ್ಲವೂ ಆಗಬೇಕೆಂದು ನಾವು ಒತ್ತಾಯವನ್ನು

ಮಾಡಿದ್ದೇವೆ. ಕೊಟ್ಟೂರು–ಹರಿಹರ. ಬೆಂಗಳೂರು–ಕೆಂಗೇರಿ. ಕೊಟ್ಟೂರು–ಹರಿಹರ–ಹರಪನಹಳ್ಳಿ ಹೊಸಲೈನ್. ಬೆಂಗಳೂರು–ಕೆಂಗೇರಿ. ಎಲೆಕ್ಟ್ರೀಫಿಕೇಷೇನ್ ಮತ್ತು ಡಬ್ಲಿಂಗ್ ಕೆಂಗೇರಿ–ರಾಮನಗರ ಡಬ್ಲಿಂಗ್ ಬಿಜಾಪುರ–ಗದಗ ಗೇಜ್ ಕನ್ವರಷನ್. ಹಾಸನ–ಮಂಗಳೂರು ಗೇಜ್ ಕನ್ವರಷನ್ ಹಾಸನ–ಬೆಂಗಳೂರು ವಯಾ ಶ್ರವಣಬೆಳಗೊಳ. ಕಡೂರು–ಚಿಕ್ಕಮಗಳೂರು–ಸಕಲೇಶಪುರ ಬೆಂಗಳೂರು–ಸತ್ಯಮಂಗಲ ವಯಾ ಕನಕಪುರ, ಹುಬ್ಬಳ್ಳಿ–ಅಂಕೋಲ. ಚಾಮರಾಜನಗರ–ಮೆಟ್ಟುಪಾಳ್ಯ, ಮುನಿರಾಬಾದ್–ಮೆಹಬೂಬ್‌ನಗರ–ರಾಯಚೂರು. ಬೀದರ್–ಗುಲ್ಬರ್ಗ. ಮೈಸೂರು–ಚಾಮರಾಜನಗರ, ಶಿವಮೊಗ್ಗ–ತಾಳಗುಪ್ಪ, ಯಶವಂತಪುರ–ತುಮಕೂರು ಹೊಸಪೇಟೆ–ತೋರಣಗಲ್. ಬೆಂಗಳೂರು–ವೈಟ್‌ಫೀಲ್ಡ್–ಕೆ.ಆರ್.ಪುರಂ. ಇವೆಲ್ಲ ಪ್ರಾಜೆಕ್ಟ್ಸ ಗಳು ಆಗಲೇಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರೆ ನಾವು ಒತ್ತಾಯವನ್ನು ಮಾಡಿದ್ದೇವೆ. ಡೆಲಿಗೇಷನ್ ರೂಪದಲ್ಲಿ ಹೋಗಿದ್ದೇವೆ. ಮಾನ್ಯ ಪ್ರಧಾನಮಂತ್ರಿಗಳಿಗೆ ಹೇಳಿದ್ದೇವೆ. ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದ್ದೇವೆ. ಅವರು ಬಜೆಟ್ ಮಂಡನೆ ಮಾಡುವುದಕ್ಕೆ ಮುಂಚೆ ನಾವು ಒತ್ತಾಯವನ್ನು ತಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಶೇಕಡ 1 ಭಾಗ ಅವರು ನಮಗೆ ಕೊಡಲಿಲ್ಲ. ಇದರ ಬಗ್ಗೆ ನಾವು ಪರಿಣಾಮಕಾರಿಯಾಗಿ ಕೇಂದ್ರದ ಮೇಲೆ ನಾವು ಒತ್ತಡವನ್ನು ತರುತ್ತಿಲ್ಲ. ಕೇಂದ್ರದ ಗಮನ ಸೆಳೆಯುವಂತಹ ವಿಚಾರವನ್ನು ನಾವು ಮಾಡುತ್ತಿಲ್ಲ. ಇಷ್ಟೊಂದು ನಾವು ಬೇಡಿಕೆಯನ್ನು ಅವರ ಮುಂದಿಟ್ಟಿದ್ದೇವೆ. ಇದರಲ್ಲಿ ಯಾವುದಾದರೊಂದು ಮೈಸೂರು–ಬೆಂಗಳೂರು. ವಿಧ್ಯುಚ್ಛಕ್ತಿ ರೈಲು ಇಲ್ಲ. ಜೋಡಿ ರೈಲು ಇಲ್ಲ. ಹುಬ್ಬಳ್ಳಿ–ಬೆಂಗಳೂರು. ಹುಬ್ಬಳ್ಳಿ–ಬಾಂಬೆ. ಹುಬ್ಬಳ್ಳಿ–ಪೂನಾ ರಾತ್ರಿ ರೈಲು ಇಲ್ಲ. ಮತ್ತೇ ಕೊಲಾರಕ್ಕೆ ರೈಲು ಇಲ್ಲ. ನಮಗೆ ಎಲ್ಲಾ ಸಂಪೂರ್ಣವಾಗಿ ನಮ್ಮ ರೈಲ್ವೆ ಬೇಡಿಕೆಗಳಲ್ಲಿ ಶೇಕಡ 1 ಭಾಗ ಇಲ್ಲ. ಇದರ ಬಗ್ಗೆ ನಮ್ಮ ಲೋಕಸಭಾ ಸದಸ್ಯರುಗಳು ತೀವ್ರವಾಗಿ ಹೋರಾಟವನ್ನು ಮಾಡಬೇಕು. ಮಾನ್ಯ ಅಧ್ಯಕ್ಷರ ಮೂಲಕ ತಮಗೆ ನಾನು ಹೇಳುತ್ತೇನೆ. ಚಾಮರಾಜನಗರ–ಮೆಟ್ಟುಪಾಳ್ಯದ ಬಗ್ಗೆ ಬನ್ನಾರಿಯಲ್ಲಿ ಅವರು ಶಂಕುಸ್ಥಾಪನೆಯನ್ನು ಮಾಡಿದರು ಒಂದು ನಯಾಪೈಸೆ ಹಣವನ್ನು ಇಡಲಿಲ್ಲ. ಇದರ ಬಗ್ಗೆ ನಾವು ಹತ್ತಾರು ವರ್ಷಗಳಿಂದ ಹೋರಾಟವನ್ನು ಮಾಡುತ್ತಿದ್ದೇವೆ. ನಮ್ಮ ಹೋರಾಟ ಸಾಲದು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರೆ. ಉತ್ತರಕನ್ನಡ ಜಿಲ್ಲೆಗೆ ಅವರು ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಬೆಂಬಲ ಸೂಚಿಸಿಯೇ ನಾನು ಕೇಳುತ್ತಿರುವುದು. ನಮ್ಮ ಹೋರಾಟ ಸಾಲದು ನಮ್ಮ ಲೋಕಸಭಾ ಸದಸ್ಯರು ನಾವೆಲ್ಲರೂ ರಾಜೀನಾಮೆಯನ್ನು ಕೊಡುತ್ತೇವೆ. ಎಂದು ಅವರು ಹೇಳಲಿ. ನೀವು ಅವರಿಗೆ ಹೇಳಿ ಒತ್ತಾಯವನ್ನು ಮಾಡಿಸಬೇಕು. ಸುಮ್ಮನೆ ಹೋಗಿ ದೆಹಲಿಯಲ್ಲಿ ಭಾಷಣ ಮಾಡಿದರೆ ಇದು ಆಗುತ್ತದೆಯೇ? ನಮ್ಮ ಸರ್ಕಾರದ ಒತ್ತಡ ಏನು ಎಂದು ಅವರಿಗೆ ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಮಾನ್ಯ ಸಚಿವರಲ್ಲಿ ಒಂದೇ ಒಂದು ವಿನಂತಿಯನ್ನು ಬಯಸುತ್ತೇನೆ. ಹುಬ್ಬಳ್ಳಿ–ಅಂಕೋಲ ರೈಲು ಆಗುವ ಬಗ್ಗೆ ಎಷ್ಟು ಮಹತ್ವವಿದೆ ಎಂದರೆ ಸರ್ಕಾರಕ್ಕೂ ಮನದಟ್ಟಾಗಿದೆ. ನಮ್ಮೆಲ್ಲರ ಅಗತ್ಯತೆಯೂ ಗೊತ್ತಿದೆ. ಏಕೆಂದರೆ ಬರೀ ಅದಿರನ್ನು ಸಾಗಿಸುವುದು. ಸರಕು ಸಾಗಿಸುವುದಕ್ಕೆ ಅಷ್ಟೇ ಸೀಮಿತವಾಗಿಲ್ಲ. ಉತ್ತರಕನ್ನಡ ಜಿಲ್ಲೆ ಪ್ರವಾಸೋದ್ಯಮ ಬಹಳ ಪ್ರಸಿದ್ಧಿಯನ್ನು ಪಡೆಯುತ್ತಿದೆ. ಅದಕ್ಕೂ ಕೂಡ ಅನುಕೂಲವಾಗುತ್ತದೆ. ಬೇರೆ ಬೇರೆ ನೈಸರ್ಗಿಕ ಬಂದರು ಇದೆ. ಅದರ ಅಭಿವೃದ್ಧಿಯಾದರೆ ಅದರಿಂದಲೂ ಸಹ ವ್ಯಾಪಾರ ವಹಿವಾಟುಗಳಿಗೆ ಅನುಕೂಲವಾಗುತ್ತದೆ. ಇದರೊಳಗೆ ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ರಾಜ್ಯ ಸರ್ಕಾರದ ಅರಣ್ಯ ಇಲಾಖೆಯವರು ಇರಬಹುದು. ತಾವು ವರದಿ ಕೊಡುವಾಗ ಇರಬಹುದು. ಅದು ಯಲ್ಲಾಪುರದ ಮಾರ್ಗವಾಗಿ ಅಂಕೋಲಕ್ಕೆ ಹೋಗಿ ಸೇರುತ್ತದೆ. ಅಲ್ಲಿ ದಟ್ಟ ಅಡವಿ ಇದೆ. ಆ ದಟ್ಟ ಅಡವಿಯ ಮಧ್ಯದಲ್ಲಿ ಹೋಗುವುದು ಪರಿಸರ ಹಾನಿಯಾಗುತ್ತದೆ ಎಂಬ ಬಗ್ಗೆ ಕೂಗು ಸಹ ಇದೆ. ಅಲ್ಲಿ ಕೆಲವು ಕಡೆಯಲ್ಲಿ ಸುರಂಗವನ್ನು ಮಾಡಿ ರೈಲ್ವೆ ಮಾರ್ಗವನ್ನು ಹಾಕಿಕೊಂಡು ಹೊಗುವುದಕ್ಕೆ ಸಾಧ್ಯವಿದೆ. ಕೊಂಕಣ ರೈಲ್ವೆಯಲ್ಲಿ ಸುರಂಗವನ್ನು ಮಾಡಿಕೊಂಡು ಹೋಗಿದ್ದಾರೋ ಆ ರೀತಿಯಾಗಿ ಸುರಂಗ ಮಾರ್ಗದ ಮೂಲಕ ಪರಿಸರದ ರಕ್ಷಣೆಯನ್ನು ಮಾಡುತ್ತಾ ನಾವು ರೈಲ್ವೆ ಲೈನನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯತೆಗಳು ಇವೆ. ಹಾಗಾಗಿ ಈ ಎಲ್ಲಾ ಸಂಗತಿಗಳ ಬಗ್ಗೆ ಸಮಗ್ರವಾಗಿ ಯೋಜನೆಯನ್ನು ಮಾಡಿ ಪರಿಸರದ ರಕ್ಷಣೆಯ ಹಿನ್ನೆಲೆಯಲ್ಲೂ ಕೂಡ ಯೋಜನೆಯನ್ನು ಮಾಡುತ್ತಾ ಅಭಿವೃದ್ಧಿ ಪೂರ್ವಾಕವಾದಂತಹ ಈ ಕೆಲಸ ಆಗುವುದಕ್ಕೆ ಸರ್ಕಾರ ಹೆಚ್ಚಿನ ಗಮನವನ್ನು ಕೊಡಬೇಕೆಂದು ಇನ್ನೊಂದು ಸಲ ಆಗ್ರಹಿಸುತ್ತಿದ್ದೇನೆ. ಇದರೊಳಗೆ ಉತ್ತರ ಕರ್ನಾಟಕದ ಅಭಿವೃದ್ಧಿಯೂ ಕೂಡ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಗಮನ ಕೊಡುತ್ತೇನೆ.